

# ಗುಲ್‌ಮೊಹರ್

## ಕಡುಬೇಸಿಗೆಯ ಕೆಂಪುಕಾವ್ಯ

■ ವಿಘ್ನೇಶ್ವರ ಹೇರಳೆ

ಬೇಸಿಗೆ ಬಂತೆಂದರೆ ಹಲವೆಡೆ, ಮೈತುಂಬ ಕಡುಗೆಂಪು ವರ್ಣದ ಹೂಗಳನ್ನು ಹೊತ್ತ ವೃಕ್ಷಗಳು ಕಂಗೊಳಿಸುತ್ತವೆ. ನೋಡುಗರ ಕಣ್ಣಿಗೆ ಕೆಂಪನೆಯ ರಂಗು, ನಡೆದಾಡುವವರ ಮೈಗೆ ತಂಪನೆಯ ನೆರಳು ನೀಡುವ ಈ ಮರ 'ಗುಲ್‌ಮೊಹರ್'. ಏಪ್ರಿಲ್–ಮೇ ಜೂನ್ ತಿಂಗಳುಗಳಲ್ಲಿ ಹೂಗಳನ್ನು ಅರಳಿಸಿ ಕಂಗೊಳಿಸುವುದರಿಂದ ಇದಕ್ಕೆ 'ಮೇ ಫ್ಲವರ್' ಎಂದೂ ಹೆಸರಿದೆ.

ಮೇ ಫ್ಲವರ್‌ನ ಮೂಲ ಮಡಗಾಸ್ಕರ್. ಫೆಬಾಸಿಯೇ ಕುಟುಂಬದ ಸೀಸಲ್ಪಿನಿಯೊಯಿಡೆ ಉಪಕುಟುಂಬಕ್ಕೆ ಸೇರಿದ ಇದರ ಸಸ್ಯಶಾಸ್ತ್ರೀಯ ಹೆಸರು ಡೆಲೊನಿಕ್ಸ್ ರೆಜಿಯ.

ಇದನ್ನು ಕನ್ನಡದಲ್ಲಿ ಕತ್ತಿಕಾಯಿ ಮರ ಎಂದೂ, ಹಿಂದಿಯಲ್ಲಿ ಗುಲ್‌ಮೊಹರ್ ಎಂದೂ ಕರೆಯಲಾಗುತ್ತದೆ. ರಾಯಲ್ ಪೊಯಿನ್ಸಿಯಾನಾ, ಪ್ಲ್ಯಾಂಬೊಯೆಂಟ್, ಕಾಡಿನ ಬೆಂಕಿ, ಬೆಂಕಿ ಮರ ಎಂದೆಲ್ಲ ಕರೆಯಲಾಗುವ ಇದಕ್ಕೆ ಕೆಂಪು ತುರಾಯಿ, ದೊಡ್ಡ ರತ್ನಗಂಧಿ, ಸೀಮೆ ಸಂಕೇಶ್ವರ, ಕೃಷ್ಣಾಚುರ, ರಾಧಾಚುರ ಮುಂತಾದ ಹೆಸರುಗಳೂ ಇವೆ.

ಗುಲ್‌ಮೊಹರ್ ಉಷ್ಣವಲಯದ ಮರವಾದ್ದರಿಂದ ಪ್ರಪಂಚದ ಉಷ್ಣವಲಯ ವಾತಾವರಣದಲ್ಲೆಲ್ಲ ಬೆಳೆಯಬಲ್ಲದು. ಸುಮಾರು 15ರಿಂದ 60 ಅಡಿ ಎತ್ತರ ಬೆಳೆಯುವ ಇದು ಹೂ ಬಿಡುವ ವರ್ಗದ ಅಲಂಕಾರಿಕ ಮರ. ಮೈ ತುಂಬ ಕಡುಗೆಂಪು, ಕಿತ್ತಳೆಗೆಂಪು ಅಥವಾ ಕೇಸರಿ ಬಣ್ಣದ ಹೂ ಅರಳಿದಾಗ ಹಸುರು ವೃಕ್ಷಕ್ಕೆ ಕೆಂಪು ಪುಷ್ಪಗಳ ಅಲಂಕಾರ ಕೆಂಪು ಚಾದರ ಹೊದ್ದಂತೆ, ಕೆಂಬಣ್ಣದ ಕೊಡೆ ಹಿಡಿದಂತೆ. ಹೂಗಳು ಉದುರಿ ನೆಲದ ಮೇಲೆಲ್ಲ ಬಿದ್ದಾಗ ಕೆಂಪು ರತ್ನಗಂಬಳಿ ಹರಡಿದಂತೆ ಕಾಣುತ್ತದೆ. ಇದರಲ್ಲಿ ಹಳದಿ ಮತ್ತು ಬಿಳಿ ಹೂ ಬಿಡುವ ಮರಗಳ ಜಾತಿಗಳೂ ಇವೆ.



ಅವರೆಕಾಯಿಯಂತಹ ಉದ್ದನೆಯ ಕತ್ತಿಯಾಕಾರದ ಕೋಡು ಸಣ್ಣ ಗಾತ್ರದ 20–30 ಬೀಜಗಳನ್ನು ಹೊಂದಿರುತ್ತದೆ. ಸುಮಾರು ಐದು ಸೆಂ.ಮೀ. ಅಗಲ, ಅರುವತ್ತು ಸೆಂ.ಮೀ. ಉದ್ದ ಬೆಳೆಯಬಲ್ಲ ಹಸುರು ಬಣ್ಣದ ಕೋಡು ಬಲಿತಾಗ ಕಡುಗಂದು ಬಣ್ಣಕ್ಕೆ ತಿರುಗುತ್ತದೆ.

ಬೂದು ಮಿಶ್ರಿತ ಕಂದು ಬಣ್ಣದ ಮರದ ಕಾಂಡ ಗಂಟುಗಳಿಂದ ಕೂಡಿರುತ್ತದೆ. ಮರದ ಬೀಜಗಳನ್ನು ನೀರಿನಲ್ಲಿ ನೆನೆಸಿ ಅಥವಾ ರೆಂಬೆಯ ತುಂಡನ್ನು ನೆಟ್ಟು ಹೊಸ ಸಸ್ಯಗಳನ್ನು ಬೆಳೆಸಬಹುದು. ಅಗಲವಾಗಿ ಹರಡುವುದರಿಂದ ಈ ಮರವನ್ನು ಪ್ರಮುಖವಾಗಿ ಅಲಂಕಾರಕ್ಕಾಗಿ ಹಾಗೂ ನೆರಳಿಗಾಗಿ ಸಾಲುಮರದಂತೆ ಬೆಳೆಸಲಾಗುತ್ತದೆ.

ಇದರ ಬೀಜದಿಂದ ತಯಾರಿಸಲಾಗುವ ಅಂಟು ಮತ್ತು ಎಣ್ಣೆಯನ್ನು ಆಹಾರ, ಜವಳಿ, ಚರ್ಮ, ಸಾಬೂನು, ಔಷಧಿ ಮುಂತಾದ ಉದ್ಯಮಗಳಲ್ಲಿ ಬಳಸಲಾಗುತ್ತದೆ. ■